ಅಂದುಕೊಂಡಷ್ಟು ಸರಳವಲ್ಲ ಎಂಬುದನ್ನು ಅವರ ಮುಖಭಾವವೇ ಹೇಳುತ್ತಿತ್ತು. "ಎಲ್ಲಾದರೂ ಸಾವಾಗಿದ್ದರೆ ಹೇಳಿ, ವರದಿ ಮಾಡಬೇಕು" ಅಂತ ಯಾರನ್ನಾದರೂ ಕೇಳಿದರೆ ಇವರಿಗೆ ಮನೋವೈಕಲ್ಯವಾಗಿದೆ ಅಂದುಕೊಳ್ಳುವವರೇ ಹೆಚ್ಚು. ಇದೊಂದು ದೊಡ್ಡ ಪ್ರಶ್ನೆಯಾಯಿತು. ಸತತ ಮೂರು ಗಂಟೆ ಕುಳಿತು ಚರ್ಚೆ ಮಾಡಿದ್ದ ಇಬ್ಬರಿಗೂ ಸಾಕಾಗಿತ್ತು. ಆರಂಭದಲ್ಲಿ ತಮಾಷೆಯಾಗಿ ಕಂಡಿದ್ದರೂ ಬರು ಬರುತ್ತಾ ಈ ಸಾವಿನ ವರದಿಗಾರಿಕೆ ಚರ್ಚೆ ಅವರಲ್ಲಿ ಅತೀವ ಬಳಲಿಕೆ ತಂದಿತ್ತು. ಈ ಬಗ್ಗೆ ನಾಳೆ ನಾಡಿದ್ದು ಯೋಚನೆ ಮಾಡೋಣ ಅಂತ ತೀರ್ಮಾನಿಸಿ ಎದ್ದರು.

★★★

ವೆಂಕಟೇಶ ಹೋಗುವ ಹೊತ್ತಿಗಾಗಲೇ ನೆಲಮಂಗಲ ಬಳಿಯ ಮರಸಳ್ಳಿಯಲ್ಲಿ ಜನವೋ ಜನ. ವಾಹನಗಳ ಹಿಂಡು. ಬೆಳಗಿನ ಜಾವ ಭೀಕರ ಅಪಘಾತವಾಗಿ ಸತ್ತಿದ್ದ ಆರೂ ಹೆಣಗಳನ್ನು ಸಾಲಾಗಿ ಜೋಡಿಸಿ ಬಿಳಿಬಟ್ಟೆ ಹೊದಿಸಿದ್ದರು. ಎಲ್ಲರಿಗೂ 25–30 ವರ್ಷ. ದುಡಿಯೋ ವಯಸ್ಸು. ಒಬ್ಬನಿಗಂತೂ ಮದುವೆಯಾಗಿ ತಿಂಗಳೂ ಆಗಿಲ್ಲ ಎಂದು ಕೆಲವರು ಮಾತಾಡಿದ್ದು ಕೇಳಿಸಿತು. ಆಯಾ ಹೆಣದ ತಲದೆಸೆ ಬಳಿ ಹೆಂಡತಿ, ಮಕ್ಕಳು, ಸಂಬಂಧಿಕರು ಕುಳಿತು ರೋದಿಸುತ್ತಿದ್ದರು. ಎಲ್ಲರೂ ಒಂದೇ ಸಲ ಅಳುತ್ತಾ ಮಾತಾಡುತ್ತಿದ್ದುದರಿಂದ ಏನು ಹೇಳುತ್ತಿದ್ದಾರೆ ಎಂಬುದು ಸ್ಪಷ್ಟವಾಗಲಿಲ್ಲ. ಅವನ ವರದಿಗೆ ಅದು ಮುಖ್ಯವಾಗಿತ್ತು. ಆದಷ್ಟೂ ಹತ್ತಿರದಲ್ಲಿ ನಿಂತ. ಊದಿನಕಡ್ಡಿ, ಹೂವಿನ ಪರಿಮಳ ಮೂಗಿಗೆ ಅಡರಿತು.

ಒಂದೆರಡು ಗಂಟೆ ಅಲ್ಲಿ ಕಳೆದ ವೆಂಕಟೇಶನಿಗೆ ಇಡೀ ವಾತಾವರಣದಲ್ಲಿ ಏನೋ ಅಸಹಜತೆ ಇದೆ ಎನಿಸುತ್ತಿತ್ತು. ರಾಜಕೀಯ ನಾಯಕರು ಬರುತ್ತಲೇ ಇದ್ದರು. ಒಬ್ಬೊಬ್ಬರು ಬಂದಾಗಲೂ ಫೋಟೊ ತೆಗೆಯಲಾಗುತ್ತಿತ್ತು. ಹೆಣಗಳ ಫೋಟೊ ಸೆಶನ್ ನಡೆದಂತೆ. ನಾಯಕರು ಬಂದಾಗಲೆಲ್ಲಾ ವಾರಸುದಾರರು ಅಳು ಎತ್ತರಿಸುತ್ತಿದ್ದರು. ಆ ರೀತಿ ಅಳು ಎತ್ತರಿಸಿದಾಗ ಸುತ್ತ ನೆರೆದವರು ಮೊಬೈಲ್‌ಗಳಲ್ಲಿ ಅದನ್ನು ಚಿತ್ರೀಕರಿಸಿಕೊಂಡು ವಾಟ್ಸ್‌ಆ್ಯಪ್, ಫೇಸ್‌ಬುಕ್ಕುಗಳಲ್ಲಿ ಹಾಕುತ್ತಿದ್ದರು. ಸತ್ತವರ ಮನೆಗಳನ್ನು ನೋಡಲು ಹೊರಟ. ಅಲ್ಲಿ ಒಂದಿಬ್ಬರು ಮಾತ್ರ ಕಂಡರು. ಅವರಿಗೂ ವಯಸ್ಸಾಗಿತ್ತು. ಒಂದೆರಡು ಮನೆಗೆ ಬೀಗ ಹಾಕಿದ್ದರು. ಎಲ್ಲರೂ ಹೆಣದ ಬಳಿಯೇ ಹೋಗಿದ್ದರೆನಿಸುತ್ತದೆ. ಹೆಣಗಳನ್ನು ಎಲ್ಲಿ ಹೂಳುತ್ತಾರೆ ಎಂದು ಕೇಳಿದ್ದಕ್ಕೆ, ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿ ಬಂದು ಪರಿಹಾರಧನ ಕೊಡುವವರೆಗೂ ಹೆಣಗಳನ್ನು ಎತ್ತುವುದಿಲ್ಲ ಎಂಬ ಉತ್ತರ ಬಂತು.

ಅದಾಗಲೇ ಸಂಜೆ ಆರು ಗಂಟೆ. ವಾಪಸು ಹೊರಡಲು ಸಜ್ಜಾದ. ಅಷ್ಟರಲ್ಲಿ ಸಚಿವರು ಬಂದರು. ಒಂದೊಂದೇ ಹೆಣದ ಬಳಿ ನಿಂತು ಆ ಮನೆಯವರನ್ನು ಸಮಾಧಾನಪಡಿಸುತ್ತಾ ಸ್ವಲ್ಪ ದುಡ್ಡು ಅವರ ಕೈಗಿಡುತ್ತಿದ್ದರು. ಸ್ಥಳೀಯ ನಾಯಕರು ಹೆಣದ ಮೇಲಿನ ಬಟ್ಟೆ ತೆಗೆದು ಮುಖ ತೋರಿಸುತ್ತಲೇ ಫೋಟೊಗ್ರಾಫರ್ ಕಡೆ ತಿರುಗುತ್ತಿದ್ದರು. ಎರಡನೇ ಹೆಣದ ಬಳಿ ಬಂದಾಗ ಕೋಲಾಹಲ ಶುರುವಾಯಿತು. ಮೂರು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದ ಆ ಹೆಣ್ಣುಮಗಳು ಜೋರಾಗಿ ಕಿರುಚುತ್ತಾ ನೆಲದ ಮೇಲೆ ಬಿದ್ದುಬಿಟ್ಟಳು. ನೀರು ತನ್ನಿ, ಗಾಳಿ ಹಾಕಿ ಎಂಬ ಗಲಾಟೆ. ಸಚಿವರು ಅತ್ತ ಧಾವಿಸಿದರು. ಕ್ಯಾಮರಾಗಳು ಫ್ಲಾಶ್ ಬೆಳಕು ಚೆಲ್ಲುತ್ತಾ ಚಕ್ ಚಕ್ ಎಂದವು.

ನೋವು ಒಳಗಿನಿಂದ ಬರುತ್ತಿದೆಯೋ, ಹೊರಗಿನಿಂದ ಹೇರಲ್ಪಡುತ್ತಿದೆಯೋ ತಿಳಿಯದೆ ವೆಂಕಟೇಶ ವಾಪಸ್ಸಾದ. ಎರಡು ದಿನ ಯಾವ ಕೆಲಸ ಮಾಡಲೂ ಅವನಿಗೆ ಮನಸ್ಸಾಗಲಿಲ್ಲ. ಆ ಎಳೇ ವಿಧವೆಯ ಮುಖ ನೆನಪಾಯಿತು. ಎಷ್ಟೊಂದು ಬೆದರಿಹೋಗಿದ್ದಳು. ಕಂತು ಕಂತಾಗಿ ಅಳಬೇಕಾದ ಅವರ ಸ್ಥಿತಿ ಹೇಗಿರಬಹುದು ಎಂದುಕೊಂಡ. ಕಸಿವಿಸಿಯೇ ಹೆಚ್ಚಾಯಿತು.